# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯದಲ್ಲಿರುವ ಅಗತ್ಯ ಗ್ರಾಮಗಳಿಗೆ ರುದ್ರಭೂಮಿ ಸೌಲಭ್ಯ ಕಲ್ಪಿಸಲು ಖಾಸಗಿ ಭೂ ಮಾಲೀಕರ ಜಮೀನನ್ನು ನೇರವಾಗಿ ಕೊಂಡು ಕೊಳ್ಳುವ ಯೋಜನೆ ಬಗ್ಗೆ.

ಓದಲಾಗಿದೆ:- ಸರ್ಕಾರಿ ಆದೇಶ ಸಂಖ್ಯೆ ಕಂಇ 256 ಕಭೂಮ 92, ದಿನಾಂಕ: 21-1-94.

—:o:—

**ಪ್ರಸ್ತಾವನೆ:**

ಭೂಸ್ವಾಧೀನ ಉದ್ದೇಶ ರುದ್ರಭೂಮಿಗೆ ಎಂದು 1992-93ನೇ ಸಾಲಿನ ಆಯ ವ್ಯಯದಲ್ಲಿ ಒಂದು ಕೋಟಿ ರೂಪಾಯಿ ಅನುದಾನ ಮಾಡಲಾಗಿತ್ತು. ಮುಂದಿನ ವರ್ಷಗಳಲ್ಲಿಯೂ ಹೀಗೆಯೇ ಅವಕಾಶ ಕಲ್ಪಿಸಲಾಗಿತ್ತು. ಆದರೆ 1994-95ನೇ ಸಾಲಿನವರೆಗೆ ಬಹುಪಾಲು ಆಡಳಿತಾತ್ಮಕ ಕಾರಣಗಳಿಂದಾಗಿ ಸದರಿ ಉದ್ದೇಶಕ್ಕೆ ಆಯ ವ್ಯಯದಲ್ಲಿ ಕಾಯ್ದಿರಿಸಿದ ಹಣ ತೃಪ್ತಿಕರವಾಗಿ ವೆಚ್ಚ ಮಾಡಲಾಗದೆ ಲೆಕ್ಕ ಪರಿಶೋಧನಾ ಟೀಕೆಗೆ ಗುರಿಯಾಗುತ್ತಿರುವುದನ್ನು ಸರ್ಕಾರವು ಗಮನಿಸಿದೆ.

ಸದರಿ ಉದ್ದೇಶಕ್ಕೆ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಕ್ಕೆ ಒಳಪಡಿಸಿ ಕೈಗೊಂಡು ಜಮೀನನ್ನು ಒದಗಿಸಲು ಕನಿಷ್ಠ ಎರಡು ಮೂರು ವರ್ಷ ಕಾಲಾವಕಾಶ ವ್ಯಯವಾಗುವುದರಿಂದ ಆಯಾ ಸಾಲಿನ ಆಯ ವ್ಯಯದಲ್ಲಿ ಕಾಯ್ದಿರಿಸಿದ ಹಣ ವ್ಯಯವಾಗದೆ ಇರುವುದರಿಂದ ಮತ್ತು ಸದರಿ ಉದ್ದೇಶಕ್ಕೆ ಭೂಮಿಯ ಅಗತ್ಯತೆ ಹೆಚ್ಚುತ್ತಿರುವುದನ್ನು ದಿನಾಂಕ: 28-1-95 ರಂದು ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಕಂದಾಯ ಇಲಾಖೆಯ ಅಧಿಕಾರಿಗಳ ಸಮ್ಮೇಳನದಲ್ಲಿ ಗಮನಕ್ಕೆ ತರಲಾಯಿತು. ಅದರಂತೆ 'ಓದಲಾದ (1)ರ ಆದೇಶದಡಿ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯವರು ಅನುಷ್ಠಾನಗೊಳಿಸುತ್ತಿರುವ ಆಶ್ರಯ ಯೋಜನೆ ಮಾದರಿ ಖಾಸಗಿಯವರಿಂದ ನೇರವಾಗಿ ಜಮೀನನ್ನು ಕೊಂಡು ರುದ್ರಭೂಮಿಗೆ ಕಾಯ್ದಿರಿಸಲು ಒಂದು ಯೋಜನೆ ರೂಪಿಸುವಂತೆ ತೀರ್ಮಾನಿಸಲಾಯಿತು.

ಸರ್ಕಾರವು ಈ ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯವರು ಅನುಷ್ಠಾನಕ್ಕೆ ತಂದಿರುವ 'ಓದಲಾದ (1)ರ ಆದೇಶದಡಿ ಆಶ್ರಯ ಯೋಜನೆಯ ನಿಯಮ ಮತ್ತು ಷರತ್ತುಗಳಂತೆ ರುದ್ರಭೂಮಿಗಾಗಿ ಒದಗಿಸುವ ಉದ್ದೇಶಕ್ಕೆಂದು ಆಯ ವ್ಯಯದಲ್ಲಿ ನಿಗದಿಯಾಗಿರುವ ಮಿತಿಯೊಳಗೆ ಈ ಕೆಳಕಂಡ ಮಾರ್ಪಾಡುಗಳೊಂದಿಗೆ ಸದರಿ ಉದ್ದೇಶಕ್ಕೆಂದು ಜಮೀನನ್ನು ನೇರವಾಗಿ ಖಾಸಗಿಯವರಿಂದ ಕೊಂಡು ಕೊಳ್ಳಲು ನಿರ್ಧರಿಸಿದೆ.

1. ಕಂದಾಯ ಇಲಾಖೆಯ ಉಪವಿಭಾಗಾಧಿಕಾರಿಯ ವ್ಯಾಪ್ತಿಯಲ್ಲಿ ಬರುವ ಸದರಿ ಉದ್ದೇಶಕ್ಕಾಗಿ ಜಮೀನನ್ನು ಗುರುತಿಸಲು ಮತ್ತು ಸಂಬಂಧಿತ ಖಾಸಗಿಯವರೊಂದಿಗೆ ಜಮೀನು ಕೊಂಡುಕೊಳ್ಳಲು ಅವರ ನೇತೃತ್ವದಲ್ಲಿ ಒಂದು ಕಾರ್ಯನಿರ್ವಹಣಾ ಬಲವನ್ನು ನೇಮಿಸುವುದು. ಈ ಕಾರ್ಯನಿರ್ವಹಣಾ ಬಲದಲ್ಲಿ (1) ತಾಲ್ಲೂಕಿನ ತಹಸೀಲ್ದಾರ್ (2) ಕ್ಷೇತ್ರಾಭಿವೃದ್ಧಿ ಅಧಿಕಾರಿ ಹಾಗೂ (3) ಸಮಾಜ ಕಲ್ಯಾಣ ಇಲಾಖೆಯ ಪ್ರತಿನಿಧಿಗಳು ಇರತಕ್ಕದ್ದು.

2. ಕಾರ್ಯನಿರ್ವಹಣಾ ಬಲವು ಮೊದಲಿಗೆ ಸದರಿ ಉದ್ದೇಶಕ್ಕಾಗಿ ಜಮೀನನ್ನು ಗೊತ್ತುಪಡಿಸಿದ ನಂತರ ಕಾರ್ಯನಿರ್ವಹಣಾ ಬಲದ ಅಧ್ಯಕ್ಷರು ಪ್ರಸ್ತಾವಿತ ಜಮೀನಿನ ಮಾರುಕಟ್ಟೆ ಮೌಲ್ಯವನ್ನು ಸನಿಹದಲ್ಲಾದ ಜಮೀನಿನ ಕ್ರಯವಿಕ್ರಯಗಳ ಅಂಕಿ ಅಂಶಗಳನ್ನು ಸಂಬಂಧಿತ ಉಪನೋಂದಣಾಧಿಕಾರಿ ಕಛೇರಿಯಿಂದ ಪಡೆದು ನಿರ್ಧರಿಸತಕ್ಕದ್ದು.

3. ಮಾರಾಟವನ್ನು ಆಕರ್ಷಿಸಲು ಜಮೀನುದಾರರಿಗೆ ಮೇಲಿನಂತೆ ಜಮೀನಿನ ಮೌಲ್ಯ ನಿರ್ಧರಿಸಿದ ಮೇಲೆ ಒಟ್ಟಾರೆ ಶೇಕಡ 30 ರಷ್ಟು ಹೆಚ್ಚುವರಿ ಮೊತ್ತ ನೀಡಲು ಅಧಿಕಾರ ಕಾರ್ಯ ನಿರ್ವಹಣಾ ಬಲದ ಅಧ್ಯಕ್ಷರಿಗೆ ನೀಡುವುದು.

4. ಜಮೀನಿನ ಮಾರಾಟದ ಮೌಲ್ಯ ನಿರ್ಧರಿಸಿದಂತೆ ಜಮೀನುದಾರರಿಗೆ ಬೆಲೆ ನೀಡುವುದಾಗಿ ಅವರನ್ನು ಒಪ್ಪಿಸಲು ಮತ್ತು ಅವರಿಂದ ಒಪ್ಪಿಗೆ ಪಡೆದ ನಂತರ ಸೂಕ್ತ ಪ್ರಸ್ತಾವನೆಯನ್ನು ಕಾರ್ಯನಿರ್ವಹಣಾ ಬಲದ ಅಧ್ಯಕ್ಷರು ಜಿಲ್ಲಾಧಿಕಾರಿಗಳ ಅನುಮೋದನೆಗೆ ಎಲ್ಲಾ ಸಮರ್ಥನೆಗಳೊಂದಿಗೆ ಸಲ್ಲಿಸುವುದು.

5. ಸರಿಸಮನಾದ ಜಮೀನಿನ ಮಾರುಕಟ್ಟೆ ಬೆಲೆಗೆ ತಕ್ಕಂತೆ (ಅಂದರೆ ತೆಗೆದುಕೊಳ್ಳುವ ಜಮೀನಿನ ಬೆಲೆ) ಹಾಗೂ ಸರ್ಕಾರ ನಿಗದಿಪಡಿಸಿರುವ ಗರಿಷ್ಠ ಮಿತಿಯಲ್ಲಿ ಮಾರಾಟ ಬೆಲೆ ಕಾರ್ಯನಿರ್ವಹಣಾ ಬಲವು ನಿರ್ಧರಿಸಿದ್ದು ಸೂಕ್ತವಾಗಿದೆ ಎಂಬುದನ್ನು ಖಚಿತಪಡಿಸಿ ಜಿಲ್ಲಾಧಿಕಾರಿಗಳಿಗೆ ಅನುಮೋದನೆ ನೀಡಲು ಅಧಿಕಾರ ನೀಡಲಾಗಿದೆ.

6. ಮೇಲ್ಕಂಡ ಮಾರಾಟಕ್ಕೆ ಜಮೀನುದಾರರನ್ನು ಒಪ್ಪಿಗೆ ನೀಡದೇ ಇದ್ದ ಪಕ್ಷದಲ್ಲಿ ಸದರಿ ಗುರ್ತಿಸಿದ ಜಮೀನು ಭೂಸ್ವಾಧೀನ ಕಾಯಿದೆಯ ತುರ್ತು ವಿಧಿ ಕಲಂ 17 ರಡಿ ಭೂಸ್ವಾಧೀನಕ್ಕೆ ಒಳಪಡಿಸಿ ಸೂಕ್ತ ಅತ್ಯಲ್ಪ ಕಾಲಾವಕಾಶದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸುವುದು.

ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 185 ಭೂಸ್ವಾಮ್ಯ 92, ಬೆಂಗಳೂರು, ದಿನಾಂಕ: 20-10-95.

ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯವರು ಅನುಷ್ಠಾನಗೊಳಿಸುತ್ತಿರುವ 'ಓದಲಾದ ಸರ್ಕಾರಿ ಆದೇಶದಲ್ಲಿರುವ ಆಶ್ರಯ ಯೋಜನೆಗೆ ಸಂಬಂಧಿಸಿದ ನಿಯಮ ಹಾಗೂ ಷರತ್ತುಗಳನ್ನು ಅನುಸರಿಸಿ ಈ ಕೆಳಕಂಡ ಮಾರ್ಪಾಡುಗಳೊಂದಿಗೆ ರಾಜ್ಯದಲ್ಲಿರುವ ಆಶ್ರಯ ಗ್ರಾಮಗಳಿಗೆ ರುದ್ರಭೂಮಿ ಸೌಲಭ್ಯ ಕಲ್ಪಿಸಲು ಅತ್ಯವಶ್ಯವಾದುದರಿಂದ ಮಂಜೂರಾಗಿರುವ ಹಣದಿಂದ ರಾಜ್ಯದಲ್ಲಿರುವ ಆಶ್ರಯ ಗ್ರಾಮಗಳಿಗೆ ರುದ್ರಭೂಮಿಯ ಸೌಲಭ್ಯಕ್ಕಾಗಿ ಜಮೀನು ಕಾಯ್ದಿರಿಸಲು ನೇರವಾಗಿ ಖಾಸಗಿಯವರ ಜಮೀನು ತೆಗೆದುಕೊಳ್ಳಲು ಸರ್ಕಾರವು ಆದೇಶಿಸಿದೆ.

1. ಕಂದಾಯ ಇಲಾಖೆಯ ಉಪವಿಭಾಗಾಧಿಕಾರಿಯವರ ವ್ಯಾಪ್ತಿಯಲ್ಲಿ ಬರುವ ಸದರಿ ಉದ್ದೇಶಕ್ಕಾಗಿ ಜಮೀನು ಗುರುತಿಸಲು ಮತ್ತು ಸಂಬಂಧಿತ ಖಾಸಗಿಯವರೊಂದಿಗೆ ಜಮೀನು ತೆಗೆದುಕೊಳ್ಳಲು ಅವರ ನೇತೃತ್ವದಲ್ಲಿ ಒಂದು ಕಾರ್ಯನಿರ್ವಹಣಾ ಬಲವನ್ನು ನೇಮಿಸುವುದು. ಈ ಕಾರ್ಯನಿರ್ವಹಣಾ ಬಲದಲ್ಲಿ (1) ತಾಲ್ಲೂಕಿನ ತಹಸೀಲ್ದಾರ್ (2) ಕ್ಷೇತ್ರಾಭಿವೃದ್ಧಿ ಅಧಿಕಾರಿ ಹಾಗೂ (3) ಸಮಾಜ ಕಲ್ಯಾಣ ಇಲಾಖೆಯ ಪ್ರತಿನಿಧಿಗಳು ಇರತಕ್ಕದ್ದು.

2. ಕಾರ್ಯನಿರ್ವಹಣಾ ಬಲವು ಮೊದಲಿಗೆ ಸದರಿ ಉದ್ದೇಶಕ್ಕಾಗಿ ಜಮೀನು ಗುರುತಿಸಿದ ನಂತರ ಕಾರ್ಯನಿರ್ವಹಣಾ ಬಲದ ಅಧ್ಯಕ್ಷರು ಪ್ರಸ್ತಾವಿತ ಜಮೀನಿನ ಮಾರುಕಟ್ಟೆ ಮೌಲ್ಯವನ್ನು ಸರಿಸಮನಾದ ಜಮೀನಿನ ಕ್ರಯವಿಕ್ರಯಗಳ ಅಂಕಿ ಅಂಶಗಳನ್ನು ಸಂಬಂಧಿತ ಉಪನೋಂದಣಾಧಿಕಾರಿ ಕಛೇರಿಯಿಂದ ಪಡೆದು ನಿರ್ಧರಿಸತಕ್ಕದ್ದು.

3. ಮಾರಾಟವನ್ನು ಆಕರ್ಷಿಸಲು ಜಮೀನುದಾರರಿಗೆ ಮೇಲಿನಂತೆ ಜಮೀನಿನ ಮೌಲ್ಯ ನಿರ್ಧರಿಸಿದ ಮೇಲೆ ಒಟ್ಟಾರೆ ಶೇಕಡಾ 30 ರಷ್ಟು ಹೆಚ್ಚುವರಿ ಮೊತ್ತ ನೀಡಲು ಅಧಿಕಾರ ಕಾರ್ಯ ನಿರ್ವಹಣಾ ಬಲದ ಅಧ್ಯಕ್ಷರಿಗೆ ನೀಡುವುದು.

4. ಜಮೀನಿನ ಮಾರಾಟದ ಮೌಲ್ಯ ನಿರ್ಧರಿಸಿದಂತೆ ಜಮೀನುದಾರರಿಗೆ ಬೆಲೆ ನೀಡುವುದಾಗಿ ಅವರನ್ನು ಒಪ್ಪಿಸಲು ಮತ್ತು ಅವರಿಂದ ಒಪ್ಪಿಗೆ ಪಡೆದ ನಂತರ ಸೂಕ್ತ ಪ್ರಸ್ತಾವನೆಯನ್ನು ಕಾರ್ಯನಿರ್ವಹಣಾ ಬಲದ ಅಧ್ಯಕ್ಷರು ಜಿಲ್ಲಾಧಿಕಾರಿಗಳ ಅನುಮೋದನೆಗೆ ಎಲ್ಲಾ ಸಮರ್ಥನೆಗಳೊಂದಿಗೆ ಸಲ್ಲಿಸುವುದು.

5) ಸರಿಸಮಾನಾದ ಜಮೀನಿನ ಮಾರುಕಟ್ಟೆ ಬೆಲೆಗೆ ತಕ್ಕಂತೆ (ಅಂದರೆ ಕೊಂಡುಕೊಳ್ಳುವ ಜಮೀನ ಬೆಲೆ) ಹಾಗೂ ಸರ್ಕಾರವು ನಿಗದಿಪಡಿಸಿರುವ ಗರಿಷ್ಠ ಮಿತಿಯೊಳಗೆ ಮಾರಾಟ ಬೆಲೆ ಕಾರ್ಯನಿರ್ವಹಣಾ ಬಲವು ನಿರ್ಧರಿಸಿದಂತೆ ಸೂಕ್ತವಾಗಿದೆ ಎಂಬುದನ್ನು ಖಚಿತಪಡಿಸಿ ಜಿಲ್ಲಾಧಿಕಾರಿಗಳಿಗೆ ಅನುಮೋದನೆ ನೀಡಲು ಅಧಿಕಾರ ನೀಡುವುದು.

6) ಮೇಲ್ಕಂಡ ಷರತ್ತುಗಳಿಗೆ ಭೂಮಾಲೀಕರುಗಳು ಒಪ್ಪಿಗೆ ನೀಡದೇ ಇದ್ದ ಪಕ್ಷದಲ್ಲಿ ಸದರಿ ಜಮೀನನ್ನು ಭೂಸ್ವಾಧೀನ ಕಾಯ್ದೆಯಡಿ ತುರ್ತು ಕಲಂ 17 ರಡಿ ಭೂಸ್ವಾಧೀನಕ್ಕೆ ಒಳಪಡಿಸಿ ಸೂಕ್ತ ಅವಶ್ಯ ಕಾಲಾವಕಾಶದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸತಕ್ಕದ್ದು.

ಈ ಆದೇಶ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಗ್ರಾಅಪ ಎಂ ಗ್ರಾಯೋಜ 95, ದಿನಾಂಕ 11-0-95 ರ ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 1364 ವೆಚ್ಚ 95, ದಿನಾಂಕ:6-9-1995 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ.

ಸಹಿ:
(ಎಫ್.ಎ.ಶೇಖ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಂಚಾಯತ್ ಇಲಾಖೆ.

ನಂ.ಹೇಜಯೋ:482:95

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಹಾಸನ ಜಿಲ್ಲೆ,
ಹಾಸನ, ದಿನಾಂಕ:27-11-1995

ಆದೇಶದ ಪ್ರತಿಯನ್ನು ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ

1) ಉಪ ವಿಭಾಗಾಧಿಕಾರಿಗಳು, ಹಾಸನ : ಸಕಲೇಶಪುರ.
2) ವಿಶೇಷ ಭೂಸ್ವಾಧೀನಾಧಿಕಾರಿಗಳು, ಹೇಮಾವತಿ ಜಲಾಶಯ ಯೋಜನೆ-2, ಹಾಸನ : ಹೊಳೆನರಸೀಪುರ.
3) ಜಿಲ್ಲೆಯ ಎಲ್ಲಾ ತಹಶೀಲ್ದಾರ್ ರವರಿಗೆ.
4) ಜಿಲ್ಲೆಯ ಎಲ್ಲಾ ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ ಮತ್ತು;
5) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಹಾಸನ ರವರಿಗೆ ರವಾನಿಸಿ ಮೇಲ್ಕಂಡ ಸರ್ಕಾರಿ ಆದೇಶದನ್ವಯ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

ಜಿಲ್ಲಾಧಿಕಾರಿಗಳ ಪರವಾಗಿ,
ಹಾಸನ ಜಿಲ್ಲೆ, ಹಾಸನ.

ಜ:

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯದಲ್ಲಿರುವ ಅಗತ್ಯ ಗ್ರಾಮಗಳಿಗೆ ರುದ್ರಭೂಮಿ ಸೌಲಭ್ಯ ಕಲ್ಪಿಸಲು ಖಾಸಗಿ ಭೂ ಮಾಲೀಕರ ಜಮೀನನ್ನು ನೇರವಾಗಿ ಕೊಂಡು ಕೊಳ್ಳುವ ಯೋಜನೆ ಬಗ್ಗೆ.

ಓದಲಾಗಿದೆ:- ಸರ್ಕಾರಿ ಆದೇಶ ಸಂಖ್ಯೆ: 256 ಕದಪ 92, ದಿನಾಂಕ: 21-1-94.

-:o:-

**ಪ್ರಸ್ತಾವನೆ:**

ಭೂಸ್ವಾಧೀನ ಉದ್ದೇಶ ರುದ್ರಭೂಮಿಗೆ ಎಂದು 1992-93ನೇ ಸಾಲಿನ ಆಯ ವ್ಯಯದಲ್ಲಿ ಒಂದು ಕೋಟಿ ರೂಪಾಯಿ ಅವಕಾಶ ಮಾಡಲಾಗಿತ್ತು. ಮುಂದಿನ ವರ್ಷಗಳಲ್ಲಿಯೂ ಹೀಗೆಯೇ ಅವಕಾಶ ಕಲ್ಪಿಸಲಾಗಿತ್ತು. ಆದರೆ 1994-95ನೇ ಸಾಲಿನವರೆಗೆ ಬಹಳಷ್ಟು ಆಡಳಿತಾತ್ಮಕ ಕಾರಣಗಳಿಂದಾಗಿ ಸದರಿ ಉದ್ದೇಶಕ್ಕೆ ಆಯ ವ್ಯಯದಲ್ಲಿ ಕಾಯ್ದಿರಿಸಿದ ಹಣ ತೃಪ್ತಿಕರವಾಗಿ ಖರ್ಚು ಮಾಡಲಾಗದೆ ಲೆಕ್ಕ ಪರಿಶೋಧನಾ ಟೀಕೆಗೆ ಗುರಿಯಾಗುತ್ತಿರುವುದನ್ನು ಸರ್ಕಾರವು ಗಮನಿಸಿದೆ.

ಸದರಿ ಉದ್ದೇಶಕ್ಕೆ ಭೂಸ್ವಾಧೀನ ಕಾಯ್ದೆಯಡಿ ಭೂಸ್ವಾಧೀನತೆ ಕ್ರಮ ಕೈಗೊಂಡು ಜಮೀನನ್ನು ಒದಗಿಸಲು ಕನಿಷ್ಟ ಎರಡು ಮೂರು ವರ್ಷ ಕಾಲಾವಕಾಶ ಬೇಕಾಗುವುದರಿಂದ ಆಯಾ ಸಾಲಿನ ಆಯ ವ್ಯಯದಲ್ಲಿ ಕಾಯ್ದಿರಿಸಿದ ಹಣ ವ್ಯಯವಾಗದೇ ಇರುವುದರಿಂದ ಮತ್ತು ಸದರಿ ಉದ್ದೇಶಕ್ಕೆ ಭೂಮಿಯ ಅಗತ್ಯತೆ ಹೆಚ್ಚುತ್ತಿರುವುದನ್ನು ದಿನಾಂಕ:28-1-95 ರಂದು ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಕಂದಾಯ ಇಲಾಖೆಯ ಅಧಿಕಾರಿಗಳ ಸಮ್ಮೇಳನದಲ್ಲಿ ಗಮನಕ್ಕೆ ತರಲಾಯಿತು. ಇದರಿಂದ ಓದಲಾದ (1)ರ ಆದೇಶದಡಿ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯವರು ಅನುಷ್ಠಾನಗೊಳಿಸುತ್ತಿರುವ ಆಶ್ರಯ ಯೋಜನೆ ಮಾದರಿ ಖಾಸಗಿಯವರಿಂದ ನೇರವಾಗಿ ಜಮೀನನ್ನು ಕೊಂಡು ರುದ್ರಭೂಮಿಗೆ ಕಾಯ್ದಿರಿಸಲು ಒಂದು ಯೋಜನೆ ರೂಪಿಸುವಂತೆ ತೀರ್ಮಾನಿಸಲಾಯಿತು.

ಸರ್ಕಾರವು ಈ ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯವರು ಅನುಷ್ಠಾನಕ್ಕೆ ತಂದಿರುವ ಓದಲಾದ (1)ರ ಆದೇಶದಡಿ ಆಶ್ರಯ ಯೋಜನೆಯ ನಿಯಮ ಮತ್ತು ಷರತ್ತುಗಳಂತೆ ರುದ್ರಭೂಮಿಗಾಗಿ ಒದಗಿಸುವ ಉದ್ದೇಶಕ್ಕೆಂದು ಆಯ ವ್ಯಯದಲ್ಲಿ ಒದಗಿಸಲಾಗಿರುವ ಮಿತಿಯೊಳಗೆ ಈ ಕೆಳಕಂಡ ಮಾರ್ಪಾಡುಗಳೊಂದಿಗೆ ಸದರಿ ಉದ್ದೇಶಕ್ಕೆಂದು ಜಮೀನನ್ನು ನೇರವಾಗಿ ಖಾಸಗಿಯವರಿಂದ ಕೊಂಡು ಕೊಳ್ಳಲು ನಿರ್ಧರಿಸಿದೆ.

1. ಕಂದಾಯ ಇಲಾಖೆಯ ಉಪವಿಭಾಗಾಧಿಕಾರಿಯು ವ್ಯಾಪ್ತಿಯಲ್ಲಿ ಬರುವ ಸದರಿ ಉದ್ದೇಶಕ್ಕಾಗಿ ಜಮೀನನ್ನು ಗುರುತಿಸಲು ಮತ್ತು ಸಂಬಂಧಿತ ಖಾಸಗಿಯವರೊಂದಿಗೆ ಜಮೀನನ್ನು ಕೊಂಡುಕೊಳ್ಳಲು ಅವರ ನೇತೃತ್ವದಲ್ಲಿ ಒಂದು ಕಾರ್ಯನಿರ್ವಹಣಾ ಬಳಗವನ್ನು ನೇಮಿಸುವುದು. ಈ ಕಾರ್ಯನಿರ್ವಹಣಾ ಬಳಗದಲ್ಲಿ (1) ತಾಲ್ಲೂಕಿನ ತಹಸೀಲ್ದಾರ (2) ಕ್ಷೇತ್ರಾಭಿವೃದ್ಧಿ ಅಧಿಕಾರಿ ಹಾಗೂ (3) ಸಮಾಜ ಕಲ್ಯಾಣ ಇಲಾಖೆಯ ಪ್ರತಿನಿಧಿಗಳು ಇರತಕ್ಕದ್ದು.

2. ಕಾರ್ಯನಿರ್ವಹಣಾ ಬಳಗವು ಮೊದಲಿಗೆ ಸದರಿ ಉದ್ದೇಶಕ್ಕಾಗಿ ಜಮೀನನ್ನು ಗೊತ್ತುಪಡಿಸಿದ ನಂತರ ಕಾರ್ಯನಿರ್ವಹಣಾ ಬಳಗದ ಅಧ್ಯಕ್ಷರು ಪ್ರಸ್ತಾವಿತ ಜಮೀನಿನ ಮಾರುಕಟ್ಟೆ ಮೌಲ್ಯವನ್ನು ಸನಿಹದ ಜಮೀನಿನ ಕ್ರಯವಿಕ್ರಯಗಳ ಅಂಕಿ ಅಂಶಗಳನ್ನು ಸಂಬಂಧಿತ ಉಪನೋಂದಣಾಧಿಕಾರಿ ಕಛೇರಿಯಿಂದ ಪಡೆದು ನಿರ್ಧರಿಸತಕ್ಕದ್ದು.

3. ಮಾರಾಟವನ್ನು ಆಕರ್ಷಿಸಲು ಜಮೀನುದಾರರಿಗೆ ಮೇಲಿನಂತೆ ಜಮೀನಿನ ಮೌಲ್ಯ ನಿರ್ಧರಣೆಯ ಮೇಲೆ ಒಟ್ಟಾರೆ ಶೇಕಡ 30 ರಷ್ಟು ಹೆಚ್ಚುವರಿ ಮೊತ್ತ ನೀಡಲು ಅಧಿಕಾರ ಕಾರ್ಯನಿರ್ವಹಣಾ ಬಲದ ಅಧ್ಯಕ್ಷರಿಗೆ ನೀಡಲಾಗುವುದು.

4. ಜಮೀನಿನ ಮಾರಾಟದ ಮೌಲ್ಯ ನಿರ್ಧರಣೆಯಂತೆ ಜಮೀನುದಾರರಿಗೆ ಬೆಲೆ ನೀಡುವುದಾಗಿ ಅವರನ್ನು ಒಪ್ಪಿಸಲು ಮತ್ತು ಅವರಿಂದ ಒಪ್ಪಿಗೆ ಪಡೆದ ನಂತರ ಸೂಕ್ತ ಪ್ರಸ್ತಾವನೆಯನ್ನು ಕಾರ್ಯನಿರ್ವಹಣಾ ಬಲದ ಅಧ್ಯಕ್ಷರು ಜಿಲ್ಲಾಧಿಕಾರಿಗಳ ಅನುಮೋದನೆಗೆ ಎಲ್ಲಾ ಸಮರ್ಥನೆಗಳೊಂದಿಗೆ ಮಂಡಿಸುವುದು.

5. ಸರಿಸಮನಾದ ಜಮೀನಿನ ಮಾರುಕಟ್ಟೆ ಬೆಲೆಗೆ ತಕ್ಕಂತೆ (ಅಂದರೆ ಕೊಂಡುಕೊಳ್ಳುವ ಜಮೀನಿನ ಬೆಲೆ) ಹಾಗೂ ಸರ್ಕಾರವು ನಿಗದಿಪಡಿಸಿರುವ ಗರಿಷ್ಠ ಮಿತಿಯಲ್ಲಿ ಖರೀದಿ ಬೆಲೆ ಕಾರ್ಯನಿರ್ವಹಣಾ ಬಲವು ನಿರ್ಧರಿಸಿದ್ದು ಸೂಕ್ತವಾಗಿದೆ ಎಂಬುದನ್ನು ಖಚಿತಪಡಿಸಿ ಜಿಲ್ಲಾಧಿಕಾರಿಗಳಿಗೆ ಅನುಮೋದನೆ ನೀಡಲು ಅಧಿಕಾರ ನೀಡಲಾಗಿದೆ.

6. ಮೇಲ್ಕಂಡ ಮಾರಾಟಕ್ಕೆ ಜಮೀನುದಾರರನ್ನು ಒಪ್ಪಿಗೆ ನೀಡದೇ ಇದ್ದ ಪಕ್ಷದಲ್ಲಿ ಸದರಿ ಪ್ರಸ್ತಾಪಿತ ಜಮೀನನ್ನು ಭೂಸ್ವಾಧೀನ ಕಾಯಿದೆಯ ತುರ್ತು ವಿಧಿ ಕಲಂ 17 ರ ಡಿ ಭೂಸ್ವಾಧೀನಕ್ಕೆ ಒಳಪಡಿಸಿ ಸೂಕ್ತ ಅತ್ಯಲ್ಪ ಕಾಲಾವಕಾಶದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸುವುದು.

ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 185 ಭೂಸ್ವಾಧೀ 92, ಬೆಂಗಳೂರು, ದಿನಾಂಕ: 20-10-95.

ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯವರು ಅನುಷ್ಠಾನಗೊಳಿಸುತ್ತಿರುವ ಓದಲಾದ ಸರ್ಕಾರಿ ಆದೇಶದಲ್ಲಿರುವ ಆಶ್ರಯ ಯೋಜನೆಗೆ ಸಂಬಂಧಿಸಿದ ನಿಯಮ ಹಾಗೂ ಷರತ್ತುಗಳನ್ನು ಅನುಸರಿಸಿ ಈ ಕೆಳಕಂಡ ಮಾರ್ಪಾಡುಗಳೊಂದಿಗೆ ರಾಜ್ಯದಲ್ಲಿರುವ ಆತ್ಮ ಗ್ರಾಮಗಳಿಗೆ ರುದ್ರಭೂಮಿ ಸೌಲಭ್ಯ ಕಲ್ಪಿಸಲು ಆಯವ್ಯಯದಲ್ಲಿ ಮಂಜೂರಾಗಿರುವ ಹಣದಿಂದ ರಾಜ್ಯದಲ್ಲಿರುವ ಆತ್ಮ ಗ್ರಾಮಗಳಿಗೆ ರುದ್ರಭೂಮಿಯ ಸೌಲಭ್ಯಕ್ಕಾಗಿ ಜಮೀನು ಕಾಯ್ದಿರಿಸಲು ನೇರವಾಗಿ ಖಾಸಗಿಯವರ ಜಮೀನು ಕೊಂಡುಕೊಳ್ಳಲು ಸರ್ಕಾರವು ಆದೇಶಿಸಿದೆ.

1. ಕಂದಾಯ ಇಲಾಖೆಯ ಉಪವಿಭಾಗಾಧಿಕಾರಿಯವರ ವ್ಯಾಪ್ತಿಯಲ್ಲಿ ಬರುವ ಸದರಿ ಉದ್ದೇಶಕ್ಕಾಗಿ ಜಮೀನು ಗುರುತಿಸಲು ಮತ್ತು ಸಂಬಂಧಿತ ಖಾಸಗಿಯವರೊಂದಿಗೆ ಜಮೀನು ಕೊಂಡುಕೊಳ್ಳಲು ಅವರ ನೇತೃತ್ವದಲ್ಲಿ ಒಂದು ಕಾರ್ಯನಿರ್ವಹಣಾ ಬಲವನ್ನು ನೇಮಿಸುವುದು. ಈ ಕಾರ್ಯನಿರ್ವಹಣಾ ಬಲದಲ್ಲಿ (1) ತಾಲ್ಲೂಕಿನ ತಹಶೀಲ್ದಾರ (2) ಕ್ಷೇತ್ರಾಭಿವೃದ್ಧಿ ಅಧಿಕಾರಿ ಹಾಗೂ (3) ಸಮಾಜ ಕಲ್ಯಾಣ ಇಲಾಖೆಯ ಪ್ರತಿನಿಧಿಗಳು ಇರತಕ್ಕದ್ದು.

2. ಕಾರ್ಯನಿರ್ವಹಣಾ ಬಲವು ಮೊದಲಿಗೆ ಸದರಿ ಉದ್ದೇಶಕ್ಕಾಗಿ ಜಮೀನು ಗೊತ್ತುಪಡಿಸಿದ ನಂತರ ಕಾರ್ಯನಿರ್ವಹಣಾ ಬಲದ ಅಧ್ಯಕ್ಷರು ಪ್ರಸ್ತಾವಿತ ಜಮೀನಿನ ಮಾರುಕಟ್ಟೆ ಮೌಲ್ಯವನ್ನು ಸರಿಸಮನಾದ ಜಮೀನಿನ ಕ್ರಯವಿಕ್ರಯಗಳ ಅಂಕಿ ಅಂಶಗಳನ್ನು ಸಂಬಂಧಿತ ಉಪನೋಂದಣಾಧಿಕಾರಿ ಕಛೇರಿಯಿಂದ ಪಡೆದು ನಿರ್ಧರಿಸತಕ್ಕದ್ದು.

3. ಮಾರಾಟವನ್ನು ಆಕರ್ಷಿಸಲು ಜಮೀನುದಾರರಿಗೆ ಮೇಲಿನಂತೆ ಜಮೀನಿನ ಮೌಲ್ಯ ನಿರ್ಧರಣೆಯ ಮೇಲೆ ಒಟ್ಟಾರೆ ಶೇಕಡಾ 30 ರಷ್ಟು ಹೆಚ್ಚುವರಿ ಮೊತ್ತ ನೀಡಲು ಅಧಿಕಾರ ಕಾರ್ಯನಿರ್ವಹಣಾ ಬಲದ ಅಧ್ಯಕ್ಷರಿಗೆ ನೀಡಲಾಗುವುದು.

4. ಜಮೀನಿನ ಮಾರಾಟದ ಮೌಲ್ಯ ನಿರ್ಧರಣೆಯಂತೆ ಜಮೀನುದಾರರಿಗೆ ಬೆಲೆ ನೀಡುವುದಾಗಿ ಅವರನ್ನು ಒಪ್ಪಿಸಲು ಮತ್ತು ಅವರಿಂದ ಒಪ್ಪಿಗೆ ಪಡೆದ ನಂತರ ಸೂಕ್ತ ಪ್ರಸ್ತಾವನೆಯನ್ನು ಕಾರ್ಯನಿರ್ವಹಣಾ ಬಲದ ಅಧ್ಯಕ್ಷರು ಜಿಲ್ಲಾಧಿಕಾರಿಗಳ ...

78/107

③

5) ಸರಿಸುಮಾರು ಜಮೀನಿನ ಮಾರುಕಟ್ಟೆ ಬೆಲೆಗೆ ತಕ್ಕಂತೆ (ಅಂದರೆ ಕೊಂಡುಕೊಳ್ಳುವ ಜಮೀನಿನ ಬೆಲೆ) ಹಾಗೂ ಸರ್ಕಾರದ ನಿಗದಿಪಡಿಸಿರುವ ಗರಿಷ್ಠ ಮಿತಿಯಲ್ಲಿ ಮಾರಾಟ ಬೆಲೆ ಕಾರ್ಯನಿರ್ವಹಣಾ ಬಲವು ನಿರ್ಧರಿಸಿದ್ದು ಸೂಕ್ತವಾಗಿದೆ ಎಂಬುದನ್ನು ಖಚಿತಪಡಿಸಿ ಜಿಲ್ಲಾಧಿಕಾರಿಗಳಿಗೆ ಅನುಮೋದನೆ ನೀಡಲು ಅಧಿಕಾರ ನೀಡುವುದು.

6) ಮೇಲ್ಕಂಡ ಮಾರಾಟಕ್ಕೆ ಜಮೀನುದಾರರನ್ನು ಒಪ್ಪಿಗೆ ನೀಡದೇ ಇದ್ದ ಪಕ್ಷದಲ್ಲಿ ಸದರಿ ಗುರ್ತಿಸಿದ ಜಮೀನನ್ನು ಭೂಸ್ವಾಧೀನ ಕಾಯ್ದೆಯಡಿ ತುರ್ತು ವಿಧಿ ಕಲಂ 17 ರಡಿ ಭೂಸ್ವಾಧೀನಕ್ಕೆ ಒಳಪಡಿಸಿ ಸೂಕ್ತ ಅತ್ಯಲ್ಪ ಕಾಲಾವಕಾಶದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸುವುದು.

ಈ ಆದೇಶ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆಯವರ ಅನಧಿಕೃತ ಟಿಪ್ಪಣಿ ಸಂಖ್ಯೆ:ಗ್ರಾಅಪ 53 ಗ್ರಾಪಂಅ 95, ದಿನಾಂಕ 11-0-95 ರಡಿ ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 1364 ವೆಚ್ಚ 95, ದಿನಾಂಕ:0-9-1995 ರಡಿ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ.

ಸಹಿ:
(ಎಫ್.ಎ.ಶೇಖ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ.

ಂಂ ಂಂ ಂಂ

ನಂ.ಹೇಜಯೋ:462:95

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಹಾಸನ ಜಿಲ್ಲೆ,
ಹಾಸನ, ದಿನಾಂಕ:27-11-1995

ಆದೇಶದ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ

1) ಉಪ ವಿಭಾಗಾಧಿಕಾರಿಗಳು, ಹಾಸನ : ಸಕಲೇಶಪುರ.
2) ವಿಶೇಷ ಭೂಸ್ವಾಧೀನಾಧಿಕಾರಿಗಳು, ಹೇಮಾವತಿ ಜಲಾಶಯ ಯೋಜನೆ-2, ಹಾಸನ : ಹೊಳೆನರಸೀಪುರ.
3) ಜಿಲ್ಲೆಯ ಎಲ್ಲಾ ತಹಶೀಲ್ದಾರ್ ರವರಿಗೆ.
4) ಜಿಲ್ಲೆಯ ಎಲ್ಲಾ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಮತ್ತು;
5) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಹಾಸನ ರವರಿಗೆ ರವಾನಿಸಿ ಮೇಲ್ಕಂಡ ಸರ್ಕಾರಿ ಆದೇಶದನ್ವಯ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

27.11.95

ಜಿಲ್ಲಾಧಿಕಾರಿಗಳ ಪರವಾಗಿ,
ಹಾಸನ ಜಿಲ್ಲೆ, ಹಾಸನ.

ಜಿ: